# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 487 |
| 2 | ಸದಸ್ಯರ ಹೆಸರು | : | **ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು)** |
| 3 | ಉತ್ತರಿಸುವ ದಿನಾಂಕ | : | 19.07.2024 |
| 4 | ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಮಲೆನಾಡು ಅಭಿವೃದ್ಧಿ ನಿಗಮ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆಯೇ; ಹೌದಾದಲ್ಲಿ, ಸದರಿ ಮಲೆನಾಡು ಅಭಿವೃದ್ಧಿ ನಿಗಮಕ್ಕೆ ನಾಮನಿರ್ದೇಶನಗೊಂಡ ಅಧ್ಯಕ್ಷರ, ನಿರ್ದೇಶಕರ ಹಾಗೂ ಅಧಿಕಾರಿ ವರ್ಗದವರ ವಿವರ ನೀಡುವುದು; | ಹೌದು.<br>ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ಸಕ್ರಿಯಾವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಮಂಡಳಿಗೆ ಶ್ರೀ ಎಂ.ಆರ್ ಮಂಜುನಾಥ್ ಗೌಡ, ಇವರನ್ನು ಮಂಡಳಿಯ ಸದಸ್ಯರು ಹಾಗೂ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಮಂಡಳಿಯಲ್ಲಿ ನಿರ್ದೇಶಕರ ಹುದ್ದೆಯು ಇರುವುದಿಲ್ಲ ಹಾಗೂ ಪ್ರಸ್ತುತ ಅಧಿಕಾರಿ ವರ್ಗದವರ ವಿವರವು ಈ ಕೆಳಕಂಡಂತಿದೆ.<br>1. ಶ್ರೀಮತಿ . ಗಾಯತ್ರಿ .ಸಿ.ಎಸ್., ಕಾರ್ಯದರ್ಶಿ (ಪ್ರಭಾರ)<br>2. ಶ್ರೀ. ಎಲ್. ಹನುಮನಾಯ್ಕ, ಆಧೀನ ಕಾರ್ಯದರ್ಶಿ<br>3. ಶ್ರೀ. ಎಲ್. ಹನುಮನಾಯ್ಕ, ಹಣಕಾಸು ನಿಯಂತ್ರಕರು (ಪ್ರಭಾರ)<br>4. ಶ್ರೀ. ಶಿವಾನಂದ ಹೆಚ್. ಕುದರಿ, ಯೋಜನಾ ಉಪನಿರ್ದೇಶಕರು,<br>5. ಶ್ರೀ. ಹೆಚ್.ವಿ. ವಿಜಯ್, ಕಾರ್ಯಪಾಲಕ ಇಂಜಿನಿಯರ್ |
| (ಆ) | ರಾಜ್ಯದಲ್ಲಿ ಮಲೆನಾಡು ಅಭಿವೃದ್ಧಿ ನಿಗಮಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; ಇದರಲ್ಲಿ ಖರ್ಚಾದ ಮೊತ್ತವೆಷ್ಟು; (ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ರೂ.33.00 ಕೋಟಿ ನಿಗಧಿಯಾಗಿದ್ದು, ರೂ.33.00 ಕೋಟಿಗಳ ಅನುಧಾನವನ್ನು ಬಿಡುಗಡೆ ಮಾಡಲಾಗಿದ್ದು, ಆರಂಭಿಕ ಶಿಲ್ಕುವು ಒಳಗೊಂಡಂತೆ ರೂ.53.55 ಕೋಟಿಗಳ ವೆಚ್ಚವನ್ನು ಭರಿಸಲಾಗಿರುತ್ತದೆ. |
| (ಇ) | ಮಲೆನಾಡು ಅಭಿವೃದ್ಧಿ ನಿಗಮದಿಂದ ಮಲೆನಾಡು ಪ್ರದೇಶ ಅಭಿವೃದ್ಧಿಗೆ ಇದುವರೆಗೂ ರೂಪಿಸಿರುವ ಯೋಜನೆಗಳಾವುವು; ಸದರಿ ಯೋಜನೆಗಳು ಪ್ರಸ್ತುತ ಯಾವ ಹಂತದಲ್ಲಿವೆ? (ವಿವರ ನೀಡುವುದು) | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಮೂಲಭೂತ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ (ಕಾಲು ಸೇತುವೆ ಮತ್ತು ತೂಗು ಸೇತುವೆಗಳು), ಶಾಲೆ, ಕಾಲೇಜುಗಳು, ಆಸ್ಪತ್ರೆ ಮತ್ತು ಹಾಸ್ಟೆಲ್ ಕಟ್ಟಡ ನಿರ್ಮಾಣ, ನಗರ ಮತ್ತು ಗ್ರಾಮೀಣ ನೀರು ಸರಬರಾಜು ಯೋಜನೆಗಳು, ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಗಳಿಗೆ ಒತ್ತು ನೀಡಲಾಗಿದೆ.<br><br>ಈ ಮೇಲ್ಕಂಡ ಯೋಜನೆಗಳಲ್ಲಿ 1546 ಕಾಮಗಾರಿಗಳನ್ನು ಕೈಗೊಂಡಿದ್ದು, ಇದರಲ್ಲಿ 603 ಕಾಮಗಾರಿಗಳು ಪೂರ್ಣಗೊಂಡಿದ್ದು, 943 ಕಾಮಗಾರಿಗಳ ಪ್ರಗತಿಯ ಹಂತದಲ್ಲಿರುತ್ತದೆ. |

ಸಂಖ್ಯೆ: ಪಿಡಿಎಸ್ 26 ಎಂಡಿಬಿ 2024

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು